ಆಗಬೇಕು. ತಾವೇ ಹೋಗಿ ರೈತರಿಗೆ ಸಹಾಯ ಮಾಡಬೇಕು. ರೈತರಿಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಅಲ್ಲಿರುವ ರೇಷ್ಮೆಯನ್ನು ಹರಾಜು ಮಾಡಬೇಕು. ಅಲ್ಲಿ ಸಮಸ್ಯೆ ಬಾರದ ರೀತಿಯಲ್ಲಿ ನೀವೇ ಅದನ್ನು purchase ಮಾಡಲು ಏನೆಲ್ಲಾ ಮಾಡುವುದಕ್ಕೆ ಸಾಧ್ಯವಿದೆಯೊ ಆ ನಿಟ್ಟಿನಲ್ಲಿ ತಾವು ಇವತ್ತು ತಮ್ಮ ಮೂಲಕ ಈ ರಾಜ್ಯದ ಜನರಿಗೆ ಮೆಸೇಜ್ ಹೋಗಬೇಕು. ಒಟ್ಟಿನಲ್ಲಿ ರೈತರಿಗೆ ಸಹಾಯ ಆಗಬೇಕು. ನಾಳೆ ನಾಡಿದ್ದು ಎಂದು ಹೋದರೆ ಇದು ಆಗುವುದಿಲ್ಲ. ತರಕಾರಿಯಾಗಿದ್ದರೆ cold storage ನಲ್ಲಿ 2-3 ದಿವಸ ಇಡಬಹುದಾಗಿತ್ತು. ಆದರೆ ಇದು ಹಾಗಲ್ಲ, ಚಿಟ್ಟೆ ಹೊರಕ್ಕೆ ಬಂದುಬಿಡುತ್ತದೆ. ರೈತ ಮುಗಿದು ಹೋಗುತ್ತಾನೆ. ಆದ್ದರಿಂದ ರೈತರಿಗೆ ನೀವು ಏನು ಸಹಾಯ ಮಾಡಲು ಆಗುತ್ತದೆ ಎಂಬ ಬಗ್ಗೆ ನಮಗೆ ಉತ್ತರ ಕೊಟ್ಟುಬಿಟ್ಟರೆ ಬಹಳ ಒಳ್ಳೆಯದು.

ಶ್ರೀ ಬಿ.ಎನ್. ಬಚ್ಚೇಗೌಡ: ರೈತರು ಮತ್ತು ಮಾನ್ಯ ಸದಸ್ಯರು ಯಾವುದೇ ರೀತಿಯ ಆತಂಕ ಪಡಬೇಕಾಗಿಲ್ಲ. ಇದರಲ್ಲಿ ಮೂರು ಕೋಟಿ ಹಣವನ್ನು ಕೆಎಸ್ಎಂಬಿಗೆ ಕೊಟ್ಟು ಇನ್ನೂ ಹೆಚ್ಚು ಹಣ ಬೇಕಾಗುತ್ತದೆಯೇ ಎಂಬುದನ್ನು ತಿಳಿದುಕೊಂಡು, ಸುಮಾರು 35 ಕೋಟಿ ಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ market interventition ಮಾಡಿ, distress formula ಎಂದು ಹೇಳಿ, ಏನಾದರು distress ಆದಾಗ intervene ಆಗಿ ಎಂದು ತಾವು ಏನು ಹೇಳುತ್ತಿದ್ದೀರಿ ಇದು ನನಗೆ ಗೊತ್ತು. ಏಕೆಂದರೆ 5 ದಿವಸಗಳಾದ ಮೇಲೆ ಚಿಟ್ಟೆ ಹೊರಕ್ಕೆ ಬಂದುಬಿಡುತ್ತದೆ. ಆ ಗೂಡಿಗೆ ಬೆಲೆ ಇರುವುದಿಲ್ಲ. ಆ ದೃಷ್ಟಿಯಿಂದ ಅದನ್ನೆಲ್ಲಾ ಸರಿಪಡಿಸುವಂಥದ್ದು. ನಾನು ರಾಜ್ಯದ ರೈತರಿಗೆ ಹೇಳುವಂಥದ್ದು ಏನೆಂದರೆ, ವಿಶೇಷವಾಗಿ ರೇಷ್ಮೆ ಉತ್ಪಾದಕರಿಗೆ ಯಾವುದೇ ರೀತಿಯ ಆತಂಕ ಬೇಕಾಗಿಲ್ಲ. ಅದನ್ನು ಸರಿಪಡಿಸುವ ಕಾರ್ಯವನ್ನು ಮಾಡುತ್ತೇವೆ. ತಾವು ಹೇಳಿದ ವಿಚಾರದ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ: 1973ರ ವಕ್ಫ್ ಬೋರ್ಡ್ ಸ್ಮಾರಕವನ್ನು ಘಟುಸಿಂಗ್ ಕಮಲಸಾಬ್ ದರ್ಗಾ ಎಂದು ಕಾನೂನು ಬಾಹಿರ ಆಜ್ಞೆ ಮಾಡಿರುವುದನ್ನು ರದ್ದು ಮಾಡುವ ಬಗ್ಗೆ

ಅಧ್ಯಕ್ಷರು: ಶ್ರೀಕಾಂತ್ ಕುಲಕರ್ಣಿಯವರೆ ಮಾನ್ಯ ಸಚಿವರು ಒಂದು ವಾರ ಸಮಯ ಕೇಳಿದ್ದಾರೆ.